ಪಿ ಡಬ್ಲ್ಯೂ.1

ದಿನಾಂಕಃ 30-08-2023 ರಂದು ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀಸವಾಲು ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ</u>

ನಾನು 10 ನೇ ತರಗತಿಯವರಗೆ ಓದಿದ್ದೇನೆ. ಈ ದಾವೆಯ ಎರಡನೇ ವಾದಿ ನನ್ನ ಅಣ್ಣ. ಈ ದಾವೆಯನ್ನು ಪ್ರತಿವಾದಿಗಳು ನಾವು ಹೊಲ ಉಳುಮೆ ಮಾಡಲು ಅಡ್ಡಿಪಡಿಸಿದ ಕಾರಣ ಹೂಡಿರುತ್ತೇವೆ. ದಾವಾಸ್ತಿ ನಮ್ಮ ಮನೆತನಕ್ಕೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ನನ್ನ ಅಜ್ಜನ ಹೆಸರು ಬಸಜ್ಜ, ಬಸಜ್ಜನ ತಂದೆ ಪರತಜ್ಜ. ಸದರಿ ಪರತಜ್ಜನವರ ಹೆಸರಿಗೆ ಇದ್ದ ಆಸ್ತಿಯ ಖಾತೆ ಪಹಣಿಯನ್ನು ನಾನು ನೋಡಿಲ್ಲ. ಬಸಜ್ಜ ಸುಮಾರು 20 ವರುಷಗಳ ಹಿಂದೆ ಮೃತಪಟ್ಟಿರುತ್ತಾರೆ. ಸದರಿ ಬಸಜ್ಜನವರಿಗೆ ದಾವಾಸ್ತಿ ಯಾವ ರೀತಿ ಬಂತು ಎಂಬ ಬಗ್ಗೆ ಖಾತೆ ಪಹಣಿಯನ್ನು ನಾನು ನೋಡಿರುವುದಿಲ್ಲ. ಸದರಿ ಬಸಜ್ಜನಿಂದ ದಾವಾಸ್ತಿ ನನ್ನ ತಂದೆಗೆ ಪೌತಿ ಆಧಾರದ ಮೇಲೆ ಬಂದಿರುತ್ತದೆ. ಬಸಜ್ಜನಿಗೆ ನಮ್ಮ ತಂದೆ ಒಬ್ಬನೇ ಮಗ. ಪ್ರತಿವಾದಿಗಳ ಕುಟುಂಬದಲ್ಲಿ ಎಷ್ಟು ಜನ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಮತ್ತು ಪ್ರತಿವಾದಿಗಳು ಒಂದೇ ಊರಿನವರು ಎಂದರೆ ಸರಿ. ನಮಗೆ ದಾವಾಸ್ತಿ ನಮ್ಮ ತಂದೆಯಿಂದ ದಾನಪತ್ರದ ಮೂಲಕ ಬಂದಿರುತ್ತದೆ. ನಮ್ಮ ತಂದೆಗೆ ದಾವಾಸ್ತಿ ಹೊರತುಪಡಿಸಿ ಬೇರೆ ಆಸ್ತಿಗಳೂ ಸಹ ಇವೆ. ಸದರಿ ಆಸ್ತಿಗಳು ಇನ್ನೂ ವಿಭಾಗ ಆಗಿರುವುದಿಲ್ಲ. ನಾನು ಎರಡನೆ ವಾದಿ ಮತ್ತು ನಮ್ಮ ತಂದೆ ಇಂದಿಗೂ ಒಟ್ಟು ಕುಟುಂಬದಲ್ಲಿ ಇದ್ದೇವೆ. ಈ ದಾವೆಯ ಎರಡನೇ ಪ್ರತಿವಾದಿ ನನ್ನ ತಂದೆಯಾದ ಮಲ್ಲೇಶಪ್ಪ ನವರ ವಿರುದ್ಧ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಓ ಎಸ್ ನಂ.13/2019 ರಂತೆ ದಾವೆ ಹೂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಸದರಿ ದಾವೆಗೆ ಹಾಜರಾದ ಬಗ್ಗೆ ನನಗೆ ಗೊತ್ತಿಲ್ಲ.

ಈ ದಾವೆಯಲ್ಲಿ ಪ್ರತಿವಾದಿಗಳು ಸಲ್ಲಿಸಿದ ತಕರಾರಿನ ಬಗ್ಗೆ ನಾನು ನಮ್ಮ ವಕೀಲರಿಂದ ಕೇಳಿ ತಿಳಿದುಕೊಂಡಿರುತ್ತೇನೆ. ಸದರಿ ದಾವಾಸ್ತಿಯನ್ನು ನಮ್ಮ ಅಜ್ಜನಿಂದ ಪ್ರತಿವಾದಿಗಳು ಕ್ರಯಕ್ಕೆ ಪಡೆದಿರುವ ಬಗ್ಗೆ ತಕರಾರಿನಲ್ಲಿ ಉಲ್ಲೇಖಿಸಿರುವ ಬಗ್ಗೆ ಕೇಳಿ ತಿಳಿದುಕೊಂಡಿರುತ್ತೇನೆ. ಸದರಿ ಓ ಎಸ್ 13/2019 ರಲ್ಲಿ ಈ ದಾವೆಯ ದಾವಾಸ್ತಿಯು ಸಹ ಸೇರ್ಪಡೆ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಓ ಎಸ್ ನಂ.13/2019 ರ ದಾವಾ ವಿಚಾರವಾಗಿ ನಮ್ಮ ವಕೀಲರಿಂದ ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಹಾಗಾಗಿ ಪ್ರತಿವಾದಿಗಳು ಓ ಎಸ್ ನಂ.13/2019 ರಲ್ಲಿ ನಮೂದಿಸಿರುವ ಆಸ್ತಿಗಳ ಮಾಹಿತಿಯನ್ನು ನಾನು ತಿಳಿದುಕೊಂಡಿರುವುದಿಲ್ಲ ಎಂದರೆ ಸರಿ. ನಾವು ಮತ್ತು ನಮ್ಮ ತಂದೆ ಶಾಮೀಲಾಗಿ ಈ ದಾವಾ ಹೂಡುವ ಉದ್ದೇಶದಿಂದಲೇ ದಾನಪತ್ರವನ್ನು ಸುಳ್ಳು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಈ ದಾವೆಯ ದಾವಾಸ್ತಿಗೆ ನನ್ನ ಅಜ್ಜನಾಗಲೀ ನನ್ನ ತಂದೆಯಾಗಲೀ ಅಥವಾ ನಾವಾಗಲೀ ಕಂದಾಯ ಪಾವತಿ ಮಾಡಿಲ್ಲ ಸಾಕ್ಷಿ ಮುಂದುವರೆದು ನಮ್ಮ ತಂದೆ ಅಥವಾ ನಮ್ಮ ಅಜ್ಜ ಪಾವತಿ

ಮಾಡಿರಬಹುದು ಎಂದು ನುಡಿಯುತ್ತಾರೆ. ನಮ್ಮ ತಂದೆ ಮತ್ತು ನಮ್ಮ ಅಜ್ಜ  ಕಂದಾಯ ಪಾವತಿ ಮಾಡಿದ ವರ್ಷವಾಗಲೀ ಕಂದಾಯ ಶುಲ್ಕದ ಮೊತ್ತವಾಗಲೀ ನನಗೆ ಗೊತ್ತಿಲ್ಲ.  ಹಾಗಾಗಿ ನಮ್ಮ ಅಜ್ಜನಿಂದ ನಮ್ಮ  ತಂದೆಗೆ ಖಾತೆ ಪಹಣಿ ಯಾವ ವರ್ಷದಲ್ಲಿ ಆಯಿತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ತಿಯನ್ನು ಹೊರತುಪಡಿಸಿ ನಮ್ಮ ಮನೆತನಕ್ಕೆ ವಡ್ನಾಳ್  ಗ್ರಾಮದಲ್ಲಿ 1 ¾ ಎಕರೆ ಜಮೀನು ಇದೆ. ಸದರಿ ಜಮೀನು ನಮ್ಮ ಕುಟುಂಬಕ್ಕೆ ನಮ್ಮ  ಅಜ್ಜನಿಂದಲೇ ಬಂದಿರುತ್ತದೆ.  ಸದರಿ ಜಮೀನು ನಮ್ಮ ಅಜ್ಜನಿಂದ ನಮ್ಮ ತಂದೆಗೆ ನಿರ್ದಿಷ್ಟವಾಗಿ ಯಾವಾಗಿ ಬಂತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಜಮೀನು ನನ್ನ ತಂದೆಯ ಹೆಸರಿನಲ್ಲಿ ಈಗಲೂ ಇದೆ.  ಸದರಿ ಜಮೀನನ್ನು ಹೊರತುಪಡಿಸಿ ನಮ್ಮ ಮನೆತನಕ್ಕೆ ಬೇರೆ ಯಾವುದೇ ಆಸ್ತಿ ಇರುವುದಿಲ್ಲ. ಸದರಿ ಜಮೀನಿನ ಆದಾಯದಿಂದಲೇ ನಮ್ಮ ಕುಟುಂಬ ನಿರ್ವಹಣೆ  ನಡೆಯುತ್ತಿತ್ತು ಎಂದರೆ ಸಾಕ್ಷಿ ಎರಡೂ ಜಮೀನುಗಳ ಆದಾಯದಿಂದ ನಡೆಯುತ್ತಿತ್ತು ಎಂದು ನುಡಿಯುತ್ತಾರೆ.

ಎ ಹೆಚ್ ಶಿವರುದ್ರಪ್ಪ ಯಾರು ಎಂದು ನನಗೆ ಗೊತ್ತಿಲ್ಲ. ಸದರಿ ಶಿವರುದ್ರಪ್ಪ ನವರು  ನಮ್ಮ ಊರಿನವರೇ ಎಂದರೆ ಸರಿ.  ಸದರಿ ಶಿವರುದ್ರಪ್ಪ ನವರು ಈ ದಾವೆಯ ಪ್ರತಿವಾದಿಗಳ ಕುಟುಂಬಕ್ಕೆ ಸೇರಿದವರು ಎಂದರೆ ಸರಿ.

ನಿಪಿ.1 ನ್ನು  ಬರೆಯಲು ಕಾರಣವೇನು ಎಂದರೆ ನಾವು ಮೂವರು ಅಣ್ಣ ತಮ್ಮಂದಿರಿದ್ದು ಮುಂದೆ ಯಾವುದೇ ತೊಂದರೆ ಆಗಬಾರದು ಎಂದು ಬರೆದಿರುತ್ತಾರೆ. ಸದರಿ ನಿಪಿ.1 ರಲ್ಲಿ ನಾವು ಮೂರು ಜನರಲ್ಲಿ ಯಾರ್ಯಾರಿಗೆ ಎಷ್ಟೆಷ್ಟು ವಿಸ್ತೀರ್ಣದ ಯಾವ ಯಾವ ಭಾಗದ ಜಮೀನು ಎಂದು ಉಲ್ಲೇಖಿಸಿಲ್ಲ. ಸದರಿ ನಿಪಿ.1 ರಲ್ಲಿ ಸರ್ವೆ ನಂ.10/12 ರ ಆಸ್ತಿ  ಕುರಿತು ದಾನ ಪತ್ರವಾಗಿರುತ್ತದೆ ಸದರಿ ಆಸ್ತಿಯನ್ನು ಹೊರತುಪಡಿಸಿ ಬೇರೆ ಯಾವುದೇ ಆಸ್ತಿಯ ಉಲ್ಲೇಖ ನಿಪಿ.1 ರಲ್ಲಿ ಇರುವುದಿಲ್ಲ.

ನಮ್ಮ ಅಜ್ಜನಿಗೆ ದಾವಾಸ್ತಿ ಬಂದಾಗ ಸದರಿ ಆಸ್ತಿಯ ಚೆಕ್ಕು ಬಂದಿ ಏನಿತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ದಾವಾಸ್ತಿ ನಮ್ಮ ತಂದೆಗೆ ಬಂದ ಕಾಲಕ್ಕೆ ದಾವಾಸ್ತಿಯ ಚೆಕ್ಕು ಬಂದಿ ಪೂರ್ವಕ್ಕೆಃ ದಾರಿ , ಪಶ್ಚಿಮಕ್ಕೆ ಶಾಂತಮೂರ್ತಿಯವರ ಜಮೀನು , ಉತ್ತರಕ್ಕೆ ಸುನಂದಮ್ಮ ಅವರ ಜಮೀನು , ದಕ್ಷಿಣಕ್ಕೆ ಮಲ್ಲಪ್ಪ ರವರ ಜಮೀನು. ಸದರಿ ಚೆಕ್ಕುಬಂದಿ ಇದ್ದ ಬಗ್ಗೆ  ನಾನು ಪಹಣಿ ದಾಖಲೆಯನ್ನು ನೋಡಿರುತ್ತೇನೆ.  ಸದರಿ ಪಹಣಿಯನ್ನು ಹೊರತುಪಡಿಸಿ ನಾನು ಬೇರೆ ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ  ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.